ಲೇಖನ ಮಾಲೆ

## 'ಕಾವೇರಿ' ನಡೆದು ಬಂದ ದಾರಿ



# ನಡೆದು ಬಂದ ದಾರಿ

- ಡಿ. ಎನ್. ರಾಜಶೇಖರ್
(ಪೊಟೋಮ್ಯಾಕ್, ಮೇರಿಲ್ಯಾಂಡ್)

ವಿದೇಶದಲ್ಲಿ ಕನ್ನಡ ಸಂಘಗಳು ನಡೆದು ಬಂದ ದಾರಿಯನ್ನು ಧಾರಾವಾಹಿಯಾಗಿ ಈ ಲೇಖನ ಮಾಲೆಯಲ್ಲಿ ಪ್ರಕಟಿಸಲಾಗುವುದು. - ಸಂ.

1968-69 ರಲ್ಲಿ ಕನ್ನಡ ನಾಡಿನಿಂದ ಅಮೆರಿಕಾಕ್ಕೆ ಬಂದು ನೆಲಸಿದ ಅನೇಕ ಜನರಲ್ಲಿ ನಾನೂ ಒಬ್ಬ. ಆಗಿನ ಕಾಲದಲ್ಲಿ ವಾಷಿಂಗ್ಟನ್ ಬಾಲ್ಟಿಮೋರ್ ಭಾಗದಲ್ಲಿ ಅನೇಕ ಕನ್ನಡಿಗರಿದ್ದರೂ, ಪರಸ್ಪರ ಭೇಟಿಯಾಗುವ ಅವಕಾಶ ಅಷ್ಟು ಇರಲಿಲ್ಲ. ಆಗಿಂದಾಗ್ಗೆ ಸ್ನೇಹಿತರ ಮನೆಗಳಲ್ಲಿ ಅಥವಾ ಕೆಲವೇ ಮಂದಿ ಸ್ನೇಹಿತರುಗಳು ಪಿಕ್‌ನಿಕ್ ಮೂಲಕ ಮಾತ್ರ ಒಬ್ಬರನ್ನೊಬ್ಬರು ಸಂಧಿಸುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹೊಸಬರಿಗೆ ಇತರ ಕನ್ನಡಿಗರ ಪರಿಚಯವಾಗುವ ಅವಕಾಶವೇ ಇರುತ್ತಿರಲಿಲ್ಲ. ಮೇಲಾಗಿ ಆಗಿನ ಕಾಲದಲ್ಲಿ ಬಹಳಷ್ಟು ಜನ ವಿದ್ಯಾರ್ಥಿಗಳಾಗಿದ್ದರು. ಮೊದಲಿನಿಂದಲೂ ಸಾರ್ವತ್ರಿಕ ಕಾರ್ಯಕ್ರಮಗಳಲ್ಲಿ ಆಸಕ್ತಿವಹಿಸುತ್ತಿದ್ದ ನನಗೆ ಈ ಭಾಗದಲ್ಲಿ ಅತ್ಯಂತ ಚಟುವಟಿಕೆಯಿಂದಿದ್ದ ಇಂಡಿಯನ್ ಸ್ಟೂಡೆಂಟ್ ಅಸೋಸಿಯೇಷನ್ ಆಫ್ ಕ್ಯಾಥೋಲಿಕ್ ಯೂನಿವರ್ಸಿಟಿ ಮತ್ತು ಯಂಗ್ ಇಂಡಿಯಾ ಫೋರಂ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವಿದ್ದಿತು. ಅದರಿಂದಾಗಿ ಈ ಭಾಗದಲ್ಲಿದ್ದ ಅನೇಕ ಭಾರತೀಯರ ಪರಿಚಯವೂ ಇದ್ದಿತು. ನನ್ನ ಅನೇಕ ಸ್ನೇಹಿತರುಗಳು ಭಾಗವಹಿಸುತ್ತಿದ್ದ ತೆಲುಗು ವಿಜ್ಞಾನ ಸಮಿತಿ ಮತ್ತು ಕೇರಳ ಸಮಾಜದ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ಈ ಚಟುವಟಿಕೆಗಳನ್ನು ನೋಡಿದಾಗ ಈ ಭಾಗದಲ್ಲಿ ಕನ್ನಡ ಸಂಘ ಒಂದನ್ನು ಏಕೆ ಆರಂಭಿಸಬಾರದು ಎಂಬ ಅಭಿಲಾಷೆ ಮನಸ್ಸಿನಲ್ಲಿ ಅನೇಕ ಬಾರಿ ಬರುತ್ತಿತ್ತು. ಮನಸ್ಸಿದ್ದರೂ ಮುಂದಾಳುತನವಿಲ್ಲದೇ ಯಾವ ಕಾರ್ಯವೂ ಆಗುವುದಿಲ್ಲ. ಇಂತಹ ಮುಂದಾಳುತನವನ್ನು ಬಾಲ್ಟಿಮೋರಿನ ನನ್ನ ಮಿತ್ರ ಶ್ರೀ ಶಂಕರ ನಾರಾಯಣ ಅವರು ಒದಗಿಸಿದರು.

ಈಗಾಗಲೇ ಶ್ರೀ ನಾರಾಯಣಸ್ವಾಮಿ ಗೌಡ ಅವರು ತಮ್ಮ ನಡೆದು ಬಂದ ದಾರಿ ಲೇಖನದಲ್ಲಿ ತಿಳಿಸಿರುವಂತೆ 1971ನೇ ವರ್ಷದಲ್ಲಿ ಮಿಚಿಗನ್‌ನಲ್ಲಿ ಸ್ಥಾಪಿತವಾದ ಕನ್ನಡ ಕೂಟದ ವಿಳಾಸದರ್ಶಿಕೆ ನಮ್ಮ ಸಂಘಟನೆಗೆ ನಾಂದಿಯಾಯಿತು. ಆ ವಿಳಾಸ ದರ್ಶಿಕೆಯಲ್ಲಿ ನನ್ನ ಮತ್ತು ಶಂಕರನಾರಾಯಣರವರ ವಿಳಾಸ ಮತ್ತು ವಿವರಗಳು ಇದ್ದಿತು. ಅದನ್ನು ನೋಡಿದ ನಂತರ ನಮ್ಮ ಮನಸ್ಸಿನಲ್ಲಿ ಬಹುದಿನಗಳಿಂದಲೂ ಈ ಭಾಗದಲ್ಲಿ ಕನ್ನಡ ಸಂಘವೊಂದನ್ನು ಸ್ಥಾಪಿಸಬೇಕೆಂದಿದ್ದ ಅಭಿಲಾಷೆ ಈಗ ಸಂಘವನ್ನು ಪ್ರಾರಂಭಮಾಡಬೇಕೆಂದು ನಿರ್ಧಾರ ಮಾಡಿಕೊಂಡು, ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ಮಿಚಿಗನ್ನಿನ ಮಿತ್ರರೊಡನೆ ವಿಚಾರ ವಿನಿಮಯ ಮಾಡಲು ನಿರ್ಧರಿಸಿದೆವು. 1972ನೇ ಲೇಬರ್ ಡೇ ವಾರಾಂತ್ಯದಲ್ಲಿ ಮಿಚಿಗನ್‌ನ ಮಿತ್ರರು ಶ್ರೀಮಾನ್ ಶ್ರೀಪಾದರಾಜು, ಕೃಷ್ಣಪ್ಪ, ಪ್ರಕಾಶ್ ಮತ್ತು ಗಣೇಶ್ ರವರನ್ನು ಮಿತ್ರರಾದ ಶಂಕರನಾರಾಯಣರವರು ಬಾಲ್ಟಿಮೋರಿಗೆ ಆಹ್ವಾನಿಸಿದರು. ಆ ಮೂರು ದಿನಗಳಲ್ಲಿ ಶ್ರೀಮಾನ್ ಶಂಕರನಾರಾಯಣ, ಶ್ರೀಧರ್ ಮತ್ತು ನಾನು ಮಿಚಿಗನ್ನಿನ ಮಿತ್ರರೊಡನೆ ಕನ್ನಡ ಕೂಟದ ರೂಪರೇಷೆಗಳನ್ನು ವಿಮರ್ಶಿಸಿ ವಿಚಾರ ವಿನಿಮಯ ಮಾಡಿಕೊಂಡು, ಈ ಭಾಗದಲ್ಲಿ ಕನ್ನಡಕೂಟದ ಆಶ್ರಯದಲ್ಲಿ ಒಂದು ಕನ್ನಡಸಂಘವನ್ನು ಪ್ರಾರಂಭ ಮಾಡಬೇಕೆಂದು ನಿರ್ಧಾರಮಾಡಿದೆವು. ಸಂಘಕ್ಕೆ "ಕಾವೇರಿ" ಎಂದು ನಾಮಕರಣವಾಯಿತು. "ಕಾವೇರಿ" ಪ್ರಾರಂಭವಾದ ರೀತಿ ಇದು.

"ಕಾವೇರಿ" ಸಂಘವನ್ನು ಪ್ರಾರಂಭಮಾಡಬೇಕೆಂದು ನಿರ್ಧಾರ ಮಾಡಿದ ನಂತರ, ವಾಷಿಂಗ್ಟನ್-ಬಾಲ್ಟಿಮೋರಿನ ಎಲ್ಲಾ ಕನ್ನಡಿಗರಿಗೂ ಈ ವಿಚಾರವನ್ನು ತಿಳಿಸಿ ಆ ವರ್ಷದ ದಸರಾ ಹಬ್ಬದ ಸರಸ್ವತಿ ಹಬ್ಬದ ದಿನ "ಕಾವೇರಿ" ಸಂಘವನ್ನು ಅಧಿಕೃತವಾಗಿ ಪ್ರಾರಂಭ ಮಾಡಿದೆವು. ಶ್ರೀಮತಿ ವಿಮಲಾ ಚನ್ನಬಸಪ್ಪರವರನ್ನು ಸಂಘದ ಮೊದಲನೆಯ ಅಧ್ಯಕ್ಷಿಣಿಯರನ್ನಾಗಿ ಚುನಾಯಿಸಲಾಯಿತು. ಸಂಘ ಪ್ರಾರಂಭವಾಗಿ ಅಧಿಕಾರ ವರ್ಗವೆಲ್ಲಾ ಚುನಾಯಿತರಾದ ಮೇಲೆ ಸಂಘವನ್ನು ಮಿಚಿಗನ್ನಿನ ಕನ್ನಡ ಕೂಟದ ಅಂಗವಾಗಿರಬೇಕೆಂದಿದ್ದ ಅಭಿಪ್ರಾಯವನ್ನು ಮನ್ನಿಸದೇ, ಸ್ವತಂತ್ರವಾಗಿರಿಸಬೇಕೆಂದು ನಿರ್ಧರಿಸಲಾಯಿತು. ಎಲ್ಲಾ ಕನ್ನಡ ಸಂಘಗಳ ಉದ್ದೇಶ್ಯ ಸಹ, ಕನ್ನಡ ಭಾಷೆ, ಕಲೆ, ಸಂಸ್ಕೃತಿ ಇವುಗಳ ಪ್ರಚಾರ, ಕನ್ನಡಿಗರ ಪರಸ್ಪರ ಭೇಟಿಗೆ ಅವಕಾಶ, ಮತ್ತು ಮುಂದಿನ ಪೀಳಿಗೆಗೆ ನಮ್ಮ ಭಾಷೆ, ಆಚಾರ, ವಿಚಾರಗಳ ಪರಿಚಯ ಮಾಡಿಸುವ ಪ್ರಯತ್ನ. ಇವುಗಳನ್ನು ಕಾರ್ಯಗತಮಾಡಲು ಈವರೆಗೆ ಎಲ್ಲಾ ವರ್ಷದ ಕಾರ್ಯಕಾರೀ ಸಮಿತಿಯ ಸದಸ್ಯರುಗಳು* ಮನಸ್ಸಿಟ್ಟು ಕೆಲಸ ಮಾಡುತ್ತಿದ್ದಾರೆ. →

* [illegible] ವಾರ್ಷಿಕ ಕಾರ್ಯಕಾರಿ ಸಮಿತಿಯ ಪಟ್ಟಿಗೆ ಅನುಬಂಧ

ಕೆಲವೇ ಸ್ನೇಹಿತರುಗಳ ಉತ್ಸಾಹದಿಂದ ಪ್ರಾರಂಭವಾದ ಸಂಘ ಈಗ ಮರವಾಗಿ ಬೆಳೆದಿದೆ. ಕಳೆದ ಹದಿಮೂರು ವರ್ಷಗಳಲ್ಲಿ ಕನ್ನಡದ ಕೃಷಿಗಾಗಿ ಸಾಕಷ್ಟು ಶ್ರಮಿಸಿದೆ. ಈ ಹದಿಮೂರು ವರ್ಷಗಳಲ್ಲಿ ಕಾವೇರಿಯ ಆಶ್ರಯದಲ್ಲಿ ನಡೆದ ಮುಖ್ಯ ಕಾರ್ಯಕ್ರಮಗಳನ್ನು ನೆನೆಸುವುದು ಸೂಕ್ತ. ನನಗೆ ಜ್ಞಾಪಕವಿರುವಂತೆ ನಾನು ನೆನೆಸಲು ಪ್ರಯತ್ನ ಮಾಡುತ್ತೇನೆ. ಏನಾದರೂ ಮರೆತಿದ್ದರೆ ಕ್ಷಮಿಸುತ್ತೀರೆಂದು ನಂಬಿರುತ್ತೇನೆ. ಮೊದಲನೆಯದಾಗಿ ಗೆಳೆಯ ಶಂಕರನಾರಾಯಣರವರು ಮಕ್ಕಳಿಗೆ ಕನ್ನಡ ಕಲಿಸಲು ಕಾವೇರಿಯ ಆಶ್ರಯದಲ್ಲಿ ಪಾಠಶಾಲೆ ಪ್ರಾರಂಭಿಸಿ ಪ್ರಯತ್ನಪಟ್ಟರು. ಆದರೆ ಅದಕ್ಕೆ ಸಾಕಷ್ಟು ಪ್ರೋತ್ಸಾಹ ಸಿಗದಿದ್ದ ಕಾರಣ ಪ್ರಯತ್ನ ಸಫಲವಾಗಲಿಲ್ಲ. ಕನ್ನಡ ಪಾಠಮಾಲೆಯನ್ನ ಟೇಪ್ ಮಾಡಿಸಿ ತರಿಸಿಕೊಳ್ಳಲು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ಸಂಭಾಷಿಸಿ ಕಾವೇರಿಯ ಪರವಾಗಿ ಎರಡು ಖಾಲಿ ಟೇಪ್‌ಗಳನ್ನು ಕಳುಹಿಸಲಾಯಿತು. ಆದರೂ ಕಾರಣಾಂತರದಿಂದ ಈ ಪ್ರಯತ್ನವೂ ಸಫಲವಾಗಲಿಲ್ಲ. ಪರಿಷತ್ತಿನ ಉಪಯೋಗಕ್ಕಾಗಿ ಕಾವೇರಿಯ ಪರವಾಗಿ 40 blank tape ಗಳನ್ನು ಬಳುವಳಿಯಾಗಿ ಕಳುಹಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಕಾವೇರಿಗಾಗಿ ಸುಮಾರು 700 ಕನ್ನಡ ಪುಸ್ತಕಗಳನ್ನು ಬಳುವಳಿಯಾಗಿ ಕಳುಹಿಸಿತು. ಇದನ್ನು ಮೂಲವಾಗಿಸಿ ಕಾವೇರಿಯ ಪುಸ್ತಕ ಭಂಡಾರ ಪ್ರಾರಂಭವಾಯಿತು. ಆದರೆ ಸದಸ್ಯರುಗಳ ನಿರುತ್ಸಾಹದಿಂದ ಈ ಪ್ರಯತ್ನವೂ ಸಫಲವಾಗಲಿಲ್ಲ. ಎಷ್ಟೇ ಪ್ರಯತ್ನ ಪಟ್ಟರೂ ಸದಸ್ಯರುಗಳು ಪುಸ್ತಕ ಭಂಡಾರವನ್ನು ಇದುವರೆಗೂ ಉಪಯೋಗ ಮಾಡಿಕೊಂಡಿಲ್ಲ. ಶ್ರೀಮತಿ ವಿಮಲಾ ಚೆನ್ನಬಸಪ್ಪನವರ ಪ್ರಯತ್ನದಿಂದ ಕರ್ನಾಟಕ ಸರ್ಕಾರದಿಂದ ಕಾವೇರಿಗಾಗಿ ಒಂದು ಕನ್ನಡ ಟೈಪ್‌ರೈಟರನ್ನು ಬಳುವಳಿಯಾಗಿ ತರಿಸಲಾಯಿತು. ಸದಸ್ಯರುಗಳಿಗೆ ಕನ್ನಡ ಟೈಪ್‌ರೈಟರ್ ಉಪಯೋಗಿಸಲು ಸಾಕಷ್ಟು ಪರಿಶ್ರಮವಿಲ್ಲದ ಕಾರಣ ಇದರ ಪೂರ್ಣ ಉಪಯೋಗವನ್ನು ಪಡೆಯಲಾಗಿಲ್ಲ.

ಕಾವೇರಿಯ ಆಶ್ರಯದಲ್ಲಿ ಒಂದು ಸುದ್ದಿ ಪತ್ರಿಕೆಯನ್ನು ಪ್ರಾರಂಭಿಸಬೇಕೆಂದು ಮೊದಲಿನಿಂದಲೂ ನನಗೆ ಆಸಕ್ತಿ ಇದ್ದಿತು. ಬಹಳ ಪ್ರಯತ್ನ ಮಾಡಿ 1975 ಉಗಾದಿ ಸಂಚಿಕೆಯ ಮೂಲಕ ಒಂದು ಸುದ್ದಿ ಪತ್ರಿಕೆಯನ್ನು ಪ್ರಾರಂಭ ಮಾಡಿದೆ. ವರ್ಷದಲ್ಲಿ ಉಗಾದಿ ಮತ್ತು ದೀಪಾವಳಿ ಸಂಚಿಕೆಗಳನ್ನು ಕಾವೇರಿಯ ಪರವಾಗಿ ಹೊರಡಿಸುತ್ತಿದ್ದೆ. ಆದರೆ ಸದಸ್ಯರುಗಳ ನಿರುತ್ಸಾಹ ಮತ್ತು ಹೊಸ ಕಾರ್ಯಕಾರಿ ಸಮಿತಿಯ ಆದೇಶದಿಂದ ಈ ಚಟುವಟಿಕೆ ಈಗ ನಿಂತಿದೆ. ಆದರೆ ಕ್ರಮವಾಗಿ ವರ್ಷಕ್ಕೆ ಎರಡು ಸುದ್ದಿ ಪತ್ರಗಳನ್ನು ಹೊರಡಿಸದಿದ್ದರೂ ಕಾವೇರಿ ತನ್ನದೇ ಆದ ರೀತಿಯಿಂದ ಸಂಚಿಕೆಗಳನ್ನು ಪ್ರಕಟಿಸಲು ಪ್ರಯತ್ನ ಪಟ್ಟಿದೆ.

( ಮುಂದುವರೆಯುವುದು. )

# ಕಾವೇರಿ

(ಮೇರಿಲ್ಯಾಂಡ್, ವರ್ಜೀನಿಯಾ ಮತ್ತು ವಾಷಿಂಗ್‌ಟನ್ ಡಿ.ಸಿ. ಪ್ರದೇಶದ ಕನ್ನಡ ಸಂಘ)

ಅಧ್ಯಕ್ಷ:
ಡಾ. ಟಿ.ಆರ್. ಕೃಷ್ಣಮೂರ್ತಿ
ಉಪಾಧ್ಯಕ್ಷ:
ಡಾ. ತಾವರೆಕೆರೆ ಶ್ರೀಕಂಠಯ್ಯ
ಕಾರ್ಯದರ್ಶಿ:
ರವಿ ಸುಬ್ರಹ್ಮಣ್ಯಮ್
ಸಹ-ಕಾರ್ಯದರ್ಶಿ:
ಡಾ. ಸುಮಿತ್ರಾ ಮುರಳೀಧರ್
ಖಜಾಂಚಿ:
ಸುಲೋಚನಾ ಅಯ್ಯ
ಸಹ-ಖಜಾಂಚಿ:
ರವಿ ಶಂಕರ್

ಕಾರ್ಯಕಾರೀ ಸಮಿತಿ ಸದಸ್ಯರು:
ಸುಪ್ರಿಯಾ ಸ್ಟೀಲ್
ಕೆ.ವಿ. ಕುಮಾರ್
ವಿಜಯಾ ಪ್ರಸಾದ್
ಡಾ. ಪ್ರಭಾಕರ್ ಪಾಮಿಡಿ
ಡಾ. ಪ್ರಭಾ ಎನ್. ಕುಮಾರ್

ಬಾಲ್ಟಿಮೋರ್ ಪ್ರತಿನಿಧಿ:
ಇಂದಿರಾ ದೇವದಾಸ್

ಪತ್ರ-ವ್ಯವಹಾರಕ್ಕೆ ವಿಳಾಸ:
ಡಾ. ಟಿ.ಆರ್. ಕೃಷ್ಣಮೂರ್ತಿ,
7715 LEAR ROAD,
MC LEAN , VA 22102
PHONE: ( 703 ) 356-2073

EXECUTIVE COMMITTE 1986